ಪರವಾನಿಗೆ ಇಲ್ಲದೆ ಗಣಿಗಳನ್ನು ತೆಗೆಯುತ್ತಿರುವುದು

೧೮೨ (೨೩೨) ಶ್ರೀ ಕೆ.ಬಿ. ಶಾಣಪ್ಪ (ಶಹಾಬಾದ್).—ಮಾನ್ಯ ಅರಣ್ಯ, ಗಣಿ ಹಾಗೂ ಭೂವಿಜ್ಞಾನ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ :—

ಅ) ಸೇಡಂ ಮತ್ತು ಚಿತ್ತಾಪುರ ತಾಲ್ಲೂಕುಗಳಲ್ಲಿ ಅನೇಕರು ಪರವಾನಿಗೆ ಇಲ್ಲದೆ ಕಲ್ಲಿನ ಗಣಿಗಳನ್ನು ತೆಗೆಯುತ್ತಿರುವುದು ಸರ್ಕಾರದವರ ಗಮನಕ್ಕೆ ಬಂದಿದೆಯೇ ?

ಆ) ವಾಡಿ ಮತ್ತು ಶಹಾಬಾದ್ ಸುತ್ತಲು ಖನಿಜ ಸಂಪತ್ತನ್ನು ಲೂಟಿ ಮಾಡುತ್ತಿರುವುದು ಸರ್ಕಾರದವರ ಗಮನಕ್ಕೆ ಬಂದಿದೆಯೇ ?

ಇ) ಹಾಗಿದ್ದಲ್ಲಿ, ಈ ಬಗ್ಗೆ ಸರ್ಕಾರದವರು ಕೈಗೊಂಡ ಕ್ರಮಗಳೆ ನು ?

ಈ) ಸದರಿ ಗಣಿಗಳಿಂದ ಹಾಗೂ ಜಮೀನಿನಿಂದ ನಾಶಹೊಂದುತ್ತಿರುವ ಖನಿಜ ಸಂಪತ್ತನ್ನು ತಡೆಗಟ್ಟಲು ಕೂಡಲೇ ಕ್ರಮ ಕೈಗೊಳ್ಳಲಾಗುವುದೇ ?

ಶ್ರೀ ಜೆ.ಎಸ್. ದೇಶ್‌ಮುಖ್ (ಅರಣ್ಯ, ಗಣಿ ಮತ್ತು ಭೂವಿಜ್ಞಾನ ಮಂತ್ರಿಗಳು).—

ಅ) ಹೌದು.

ಆ) ವಾಡಿ ಮತ್ತು ಶಹಾಬಾದ್ ಸರಹದ್ದಿನಲ್ಲಿ ಲೂಟಿ ಆಗುತ್ತಿಲ್ಲ. ೨೫೧೦ ಎಕರೆ ಪ್ರದೇಶದಲ್ಲಿ ಶಹಬಾದ್ ಕಲ್ಲು ಮತ್ತು ಸುಣ್ಣದ ಕಲ್ಲನ್ನು ತೆಗೆಯಲು ೩೦ ಗುತ್ತಿಗೆಗಳನ್ನು ಮಂಜೂರು ಮಾಡಲಾಗಿದೆ. ಗಣಿಗುತ್ತಿಗೆಗಳು ಅಂತ್ಯವಾಗಿರುವ ಕೆಲವು ಪ್ರದೆ ಶಗಳಲ್ಲಿ ಗಣಿ ಕಾರ್ಯವನ್ನು ಮುಂದುವರಿಸಿಕೊಂಡು ಹೋಗುತ್ತಿರುವುದನ್ನು ಗಮನಿಸಲಾಗಿದೆ. ಆದುದರಿಂದ ಈ ಅಕ್ರಮ ಗಣಿ ಕಾರ್ಯವನ್ನು ತಡೆಯಲು ಧಾಳಿಗಳನ್ನು ಮಾಡಲಾಗಿದೆ.

ಇ) ಅಂತಹ ಅಕ್ರಮ ಗಣಿಗುತ್ತಿಗೆ ಕಾರ್ಯಗಳು ಕಂಡುಬಂದಾಗ ಅವುಗಳನ್ನು ತಡೆಯಲು ಧಾಳಿ ಮಾಡಲಾಗುತ್ತಿದೆ. ಮಂಜೂರಾದ ಗಣಿ ಪ್ರದೇಶದ ಹೊರಗಡೆ ಗುತ್ತಿಗೆದಾರರು ಗಣಿ ಕಾರ್ಯ ನಡೆಸುವುದು ಕಂಡುಬಂದಲ್ಲಿ ಅಂತಹ ಗಣಿಗುತ್ತಿಗೆಗಳನ್ನು ರದ್ದುಪಡಿಸಲಾಗುವುದು. ಅಂತಹ ಒಂದು ಪ್ರಕರಣ ಸರ್ಕಾರದ ಪರಿಶೀಲನೆಯಲ್ಲಿದೆ.

ಈ) ಹೌದು. ಅಂತಹ ಅಕ್ರಮಗಳನ್ನು ತಡೆಯಲು ಸಾಧ್ಯವಾದ ಎಲ್ಲಾ ಕ್ರಮಗಳನ್ನು ತೆಗೆದುಕೊಳ್ಳಲಾಗುವುದು.

ಶ್ರೀ ಕೆ. ಬಿ. ಶಾಣಪ್ಪ.—ಮಾನ್ಯ ಅಧ್ಯಕ್ಷರೇ, ಈ ವಿಷಯವನ್ನು ನಾನು ಪದೇ ಪದೇ ಹೇಳುತ್ತಿದ್ದೇನೆ. ವಾಡಿ, ಚಿತ್ತಾಪುರ ಮತ್ತು ಸೇಡಂಗಳಲ್ಲಿ ಈ ಮಿನರಲ್ ಕ್ವಾರಿಸ್ ಏನಿದೆ ಅದನ್ನು ಬಹಳ ಜನ ಇಲ್ಲೀಗಲ್ ಆಗಿ ಮಾಡುತ್ತಿದ್ದಾರೆ. ತಾವು ಕೇಳಿದರೆ, ತಾವು ಪರ್ಮಿಷನ್ ಕೊಟ್ಟ ಗಣಿಗಳು ಏನಿವೆ ಅಷ್ಟೇ ವಿವರಗಳನ್ನು ಕಳುಹಿಸಿಕೊಡುತ್ತಾರೆ. ಅಲ್ಲಿ ಎರಡು ಎಕರೆ, ಐದು ಎಕರೆ, ಮೂರು ಎಕರೆ ಈ ರೀತಿ ನೂರಾರು ಜನ ಹಲವತ್ತಾದ ಜಮೀನನ್ನು ಹಾಳು ಮಾಡಿ ಅಲ್ಲಿದ್ದ ಕಲ್ಲುಗಳನ್ನು ತೆಗೆದು, ಬಾಂಬೆ ಮತ್ತು ಮದ್ರಾಸ್‌ಗೆ ಕಳುಹಿಸುತ್ತಿದ್ದಾರೆ. ಆದರಿಂದ ನಿವ್ಯಾಗೆ ಬರತಕ್ಕ ರೆವಿನ್ಯೂ ಸಹ ಹೋಗುತ್ತಿದೆ. ಇನ್ನೊಂದು ವಿಚಾರ ಎಂದರೆ, ಇದಕ್ಕೆ ಇವ್ಯಾಥ ಐದುನೂರು ರೂಪಾಯಿ ರೆಂಟನ್ನು ನೀವು ಆಟ್ ಎ ಟೈಮ್ ಐದು ಸಾವಿರ ರೂಪಾಯಿ ಮಾಡಿದ್ದೀರಿ. ಇದರಿಯಾಗಿ ಅನೇಕ ಜನ ಲೀಸ್ ತೆಗೆದುಕೊಂಡಿದ್ದಂಥವರು, ಪುನಃ ಆ ಭೂಮಿಯನ್ನು ಸರಕಾರಕ್ಕೆ ಸರೆಂಡರ್ ಮಾಡಿದರು. ೨೫ ಎಕರೆ ಲೀಸ್ ತೆಗೆದುಕೊಂಡಿದ್ದವರು ಒಂದು ಎಕರೆ ಇಟ್ಟುಕೊಂಡು ಉಳಿದಾವನ್ನು ಸರೆಂಡರ್ ಮಾಡಿದರು, ಇದರಿಂದ ಖಜಾನೆಗೆ ಲಾಸ್ ಆಗುತ್ತಿದೆ. ಪಿ.ಡಬ್ಲ್ಯು.ಡಿ, ರೊಡ್ ಪಕ್ಕದಲ್ಲೂ ಕೂಡಾ ಇಲ್ಲೀಗಲ್ ಆಗಿ ಕ್ವಾರಿಸ್ ಮಾಡಿ, ವೇಸ್ಟ್ ಮೆಟೆರಿಯಲ್ ಎಲ್ಲಾ ಪಿ.ಡಬ್ಲ್ಯು.ಡಿ. ರೋಡ್ಸ್ ಮೇಲೆ ಹಾಕಿ, ಅದನ್ನು ಎನ್‌ಕ್ರೋಚ್ ಮಾಡುತ್ತಿದ್ದಾರೆ. ವಾಡಿಯಲ್ಲಿ ಒಬ್ಬರು ಸೂಪರ್‌ವೈಸರು ಇದ್ದಾರೆ, ಅವರು ಇದಕ್ಕೆ ಷಾಮಿಲಾಗಿದ್ದಾರೆ. ಇವರ ಬಗ್ಗೆ ಹಿಂದೆ ತಮ್ಮ ಕಡೆ ಡೆಲಿಗೇಷನ್ ಬಂದು ಮನವಿ ತಂದು ಕೊಡಲಾಗಿದೆ. ಈ ಪ್ರಕಾರ ಇಲ್ಲೀಗಲ್ ಆಗಿ ಮಾಡುತ್ತಿದ್ದಾರೆ, ಸಂಬಂಧಪಟ್ಟ ಅಧಿಕಾರಿಗಳ ಮೇಲೆ ಎನ್‌ಕ್ವೈರಿ ಮಾಡಿ ಕ್ರಮ ತೆಗೆದುಕೊಳ್ಳಿ ಎಂದು ಹೇಳಿದ್ದಾರೆ. ವಾಡಿಯಲ್ಲಿ ಸ್ವತಃ ನಿಮ್ಮ ಇಲಾಖೆಯ ಸೂಪರ್‌ವೈಸರ್ ಈ ಉದ್ಯಮದ ಪಾರ್ಟನರ್ ಇದ್ದಾರೆ ಎಂದು ಕೇಳಿದ್ದೇನೆ, ಅವರು ಸ್ವತಃ ಇಲ್ಲೀಗಲ್ ಆಗಿ ಕ್ವಾರಿ ನಡೆಸುತ್ತಿದ್ದಾರೆ ಎಂದು ಕೇಳಿದ್ದೇನೆ. ಅವರ ಬಗ್ಗೆ ಏನು ಕ್ರಮ ತೆಗೆದುಕೊಳ್ಳುತ್ತೀರಿ ?

ಶ್ರೀ ಜೆ.ಎಸ್. ದೇಶ್‌ಮುಖ್.—ಮಾನ್ಯ ಅಧ್ಯಕ್ಷರೇ, ಚಿತಾಪುರ, ವಾಡಿ ಕಡೆಗಳಲ್ಲಿ ಸ್ವಲ್ಪ ಜಮೀನಿನಲ್ಲಿ ನಮ್ಮ ಇಲಾಖೆಯ ಪರ್ಮಿಷನ್ ಇಲ್ಲದೆ ಇಲ್ಲೀಗಲ್ ಆಗಿ ಕ್ವಾರೀಸ್ ನಡೆಸುತ್ತಿದ್ದಾರೆ ಎಂದು ಮಾನ್ಯ ಸದಸ್ಯರು ಹೇಳಿದ್ದಾರೆ. ಈ ರೀತಿ ಅವರ ಸ್ವಂತ ಜಮೀನಿನಲ್ಲಿ ಮಾಡಿದರೆ ಕ್ರಮ ತೆಗೆದುಕೊಳ್ಳುವುದಕ್ಕೆ ನನಗೆ ಅಧಿಕಾರ ಇಲ್ಲ. ಇದರ ಬಗ್ಗೆ ನಾವು ಒಂದು ಕಾನೂನು ಮಾಡಿದ ಮೇಲೆ ಅವರ ಮೇಲೆ ಕ್ರಮ ತೆಗೆದುಕೊಳ್ಳುತ್ತೇವೆ. ಈಗ ಯಾವುದೇ ತರದ ಅಧಿಕಾರ ಇಲ್ಲ ಎಂದು ಹೇಳುತ್ತೇನೆ. ಆದರೆ ಈಗ ಈ ಬಗ್ಗೆ ಕೆಲವೊಂದು ಕೇಸಸ್ ಸಹಿತ ಬುಕ್ ಮಾಡಿದ್ದಾರೆ ಎಂದು ಹೇಳುತ್ತೇನೆ.

SRI K.B. SHANAPPA.—The officer himself is involved and is encouraging the illegal quarry. Are you going to take action ?

ಶ್ರೀ ಜೆ.ಎಸ್. ದೇಶ್‌ಮುಖ್.—ಅವರ ಹೆಸರನ್ನು ನೀವು ಕೊಡಿ, ಅವರ ಮೇಲೆ ಆಕ್ಷನ್ ತೆಗೆದುಕೊಳ್ಳುತ್ತೇನೆ.

ಶ್ರೀ ಕೆ.ಬಿ. ಶಾಣಪ್ಪ.—ವಿಜಯಕುಮಾರ್ ಎಂದು ಅವರ ಹೆಸರು.

ಅಧ್ಯಕ್ಷರು.—ನೀವು ಬರೆದು ಕಳುಹಿಸಿ, ಅವರು ಆಕ್ಷನ್ ತೆಗೆದುಕೊಳ್ಳುತ್ತಾರೆ.

ಸಾರ್ವಜನಿಕ ಉದ್ದಿಮೆರಂಗದಲ್ಲಿ ಕನ್ನಡಿಗರ ಪ್ರಾತಿನಿಧ್ಯ

೧೮೩(೧೨೭) ಶ್ರೀ ಬಾಬುರೆಡ್ಡಿ ವಿ. ತುಂಗಳ್ (ಬೀಳಗಿ).—ಮಾನ್ಯ ವಾಣಿಜ್ಯ ಕೈಗಾರಿಕಾ ಹಾಗೂ ವಿದ್ಯುತ್ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗೆ ದಯವಿಟ್ಟು ಉತ್ತರಿಸುವರೇ :—

ರಾಜ್ಯದಲ್ಲಿರುವ ಕೇಂದ್ರ ಸರ್ಕಾರದ ಸಾರ್ವಜನಿಕ ಉದ್ದಿಮೆ ರಂಗದಲ್ಲಿ ಕನ್ನಡಿಗರಿಗೆ ಪ್ರಾತಿನಿಧ್ಯ ಕ್ಕಾಗಿ ಸರ್ಕಾರದವರು ಯಾವ ಕ್ರಮ ಕೈಗೊಂಡಿದ್ದಾರೆ ?

ಶ್ರೀ ಜೆ. ಹೆಚ್. ಪಟೇಲ್ (ಕೈಗಾರಿಕಾ ಮತ್ತು ವಿದ್ಯುಚ್ಛಕ್ತಿ ಸಚಿವರು).—

ಕೇಂದ್ರ ಸರ್ಕಾರದ ಸಾರ್ವಜನಿಕ ಉದ್ದಿಮೆ ರಂಗದಲ್ಲಿ ಸ್ಥಳೀಯರಿಗೆ ಉದ್ಯೋಗಾವಕಾಶ ಕಲ್ಪಿಸಿ ಕೊಡುವ ಬಗ್ಗೆ ರಾಜ್ಯ ಸರ್ಕಾರದಿಂದ ಎಲ್ಲಾ ಕೇಂದ್ರ ಸರ್ಕಾರದ ಉದ್ದಿಮೆ ರಂಗಗಳಿಗೆ ಸೂಕ್ತ ಸಲಹೆ ಯನ್ನು ಕೊಡಲಾಗಿದೆ. ರಾಜ್ಯ ಸರ್ಕಾರದ ಆದೇಶದ ಪ್ರಕಾರ, ಕೇಂದ್ರ ಸರ್ಕಾರದ ಉದ್ಯಮಗಳಲ್ಲಿ ಅಭ್ಯರ್ಥಿಗಳನ್ನು ಆಯ್ಕೆ ಮಾಡುವಾಗ ರಾಜ್ಯ ಸರ್ಕಾರದ ಪ್ರತಿನಿಧಿಯನ್ನು ಸಂದರ್ಶನದಲ್ಲಿ ಪಾಲ್ಗೊಳ್ಳುವಂತೆ ಹಾಗೂ ಸ್ಥಳೀಯರಿಗೆ ಉದ್ಯೋಗಾವಕಾಶವನ್ನು ರಕ್ಷಿಸುವಂತೆ ವ್ಯವಸ್ಥೆ ಮಾಡ ಲಾಗಿದೆ.

ಶ್ರೀ ಬಾಬುರೆಡ್ಡಿ ವಿ. ತುಂಗಳ್.—ಮಾನ್ಯ ಸಭಾಧ್ಯಕ್ಷರೇ, ತಮಗೆಲ್ಲಾ ಗೊತ್ತಿರುವ ಹಾಗೆ ಬೆಂಗಳೂರು ನಗರದಲ್ಲಿ ಅನೇಕ ಸಾರ್ವಜನಿಕ ಉದ್ದಿಮೆಗಳು ಇವೆ. ಅವುಗಳು ಯಾವುವೆಂದರೆ ಹೆಚ್.ಎಂ.ಟಿ., ಹೆಚ್.ಎ.ಎಲ್., ಬಿ.ಇ.ಎಲ್., ಐ.ಟಿ.ಐ. ಇತ್ಯಾದಿ ಕಾರ್ಖಾನೆಗಳು ಇವೆ. ಇದರಲ್ಲಿ ಒಹಳ ಮುಖ್ಯವಾದ ಒಂದು ಕಾರ್ಖಾನೆ ಎಂದರೆ ಯಲಹಂಕದಲ್ಲಿರುವ ರೈಲ್ವೆ ಅಚ್ಚು ಮತ್ತು ಗಾಲಿ ಕಾರ್ಖಾನೆಯಲ್ಲಿ ಕನ್ನಡಿಗರು ಶೇಕಡ ೧೦-೧೫ ಪರ್ಸೆಂಟ್‌ನಷ್ಟು ಮಾತ್ರ ಇದ್ದಾರೆ. ಮಾನ್ಯ ಮಂತ್ರಿಗಳು ಕೊಟ್ಟಿರುವ ಉತ್ತರ ನನಗೆ ಸಮಾಧಾನ ತಂದಿದೆ. ಆದರೂ ಸಹ ಮಾನ್ಯ ಮಂತ್ರಿಗಳಲ್ಲಿ ನಾನು ಒಂದು ಪ್ರಶ್ನೆಯನ್ನು ಕೇಳುತ್ತೇನೆ. ಆದೇನೆಂದರೆ, ಶ್ರೀಮತಿ ಸರೋಜಿನಿ ಮಹಿಷಿಯವರ ವರದಿಯನ್ನು ಸರ್ಕಾರಕ್ಕೆ ಕೊಟ್ಟಿದ್ದಾರೆ. ಅವರ ವರದಿಯಲ್ಲಿ ಸ್ಥಳೀಯರಿಗೆ ಶೇಕಡ ೮೦ ಪರ್ಸೆಂಟ್ ಉದ್ಯೋಗಾವಕಾಶವನ್ನು ಕಲ್ಪಿಸಿಕೊಡಬೇಕೆಂದು ಹೇಳಿದ್ದಾರೆ. ಆದ್ದರಿಂದ ಮಾನ್ಯ ಮಂತ್ರಿಗಳು ಈ ಸಾರ್ವಜನಿಕ ಕಾರ್ಖಾನೆಗಳ ಮೇಲೆ ನಿಗಾ ಇಟ್ಟು, ಕನ್ನಡಿಗರಿಗೆ ಹೆಚ್ಚು ಹೆಚ್ಚು ಉದ್ಯೋಗಾವಕಾಶ ಗಳನ್ನು ಕಲ್ಪಿಸಿಕೊಡಬೇಕೆಂದು ನಾನು ವಿನಂತಿಸುತ್ತೇನೆ. ಮತ್ತು ಶ್ರೀಮತಿ ಸರೋಜಿನಿ ಮಹಿಷಿಯವರ ವರದಿಯನ್ನು ಆದಷ್ಟು ಬೇಗ ಜಾರಿಗೆ ಕೊಡಬೇಕೆಂದೂ ಸಹ ನಾನು ಒತ್ತಾಯಪಡಿಸುತ್ತೇನೆ.

ಶ್ರೀ ಜೆ. ಹೆಚ್. ಪಟೇಲ್.—ಮಾನ್ಯ ಅಧ್ಯಕ್ಷರೇ, ಮಾನ್ಯ ಸದಸ್ಯರು ವ್ಯಕ್ತಪಡಿಸಿದ ವಿಚಾರದ ಬಗ್ಗೆ ನಾವು ಚಿಂತನೆಯನ್ನು ಮಾಡುತ್ತಿದ್ದೇವೆ. ಆದರೆ ಸಾರ್ವಜನಿಕ ಉದ್ದಿಮೆಗಳಾದ ಹೆಚ್.ಎಂ.ಟಿ. ಬಿ.ಇ.ಎಲ್., ಐ.ಟಿ.ಐ. ಇತ್ಯಾದಿ ಕಾರ್ಖಾನೆಗಳು ಏನು ಇವೆ, ಆ ಕಾರ್ಖಾನೆಗಳಲ್ಲಿ ಕನ್ನಡಿಗರಿಗೆ ಶೇಕಡ